ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಅಂತರರಾಷ್ಟ್ರೀಯ (ಚುನಾವಣೆ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 03/03/2020

# ಇಸ್ರೇಲ್, ವರ್ಷದಲ್ಲಿ 3 ಚುನಾವಣೆ!

**ಜೆರುಸಲೇಂ:** ಇಸ್ರೇಲ್‌ನಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಸೋಮವಾರ ಮೂರನೇ ಬಾರಿ ಸಾರ್ವತ್ರಿಕ ಚುನಾವಣೆ ಮತದಾನ ನಡೆಯಿತು. ಶೇ.47ರಷ್ಟು ಮತದಾನ ದಾಖಲಾಗಿದ್ದು, ಕಳೆದ ಸೆಪ್ಟಂಬರ್‌ನಲ್ಲಿನ ಮತದಾನಕ್ಕಿಂತ ಶೇ.2.7 ಹೆಚ್ಚಾಗಿದೆ. ಕಳೆದೆರಡೂ ಚುನಾವಣೆಗಳಲ್ಲಿ ಯಾವ ಪಕ್ಷ ಅಥವಾ ಮೈತ್ರಿಕೂಟಕ್ಕೂ ಬಹುಮತ ಸಿಗದಿದ್ದರಿಂದ ಅತಂತ್ರ ಸಂಸತ್ ಸೃಷ್ಟಿಯಾಗಿತ್ತು. ಬಲಪಂಥೀಯ ಲಿಕುಡ್ ಪಕ್ಷದ ಬೆಂಜಮಿನ್ ನೇತಾನಹು ಕೇವಲ 1 ಸ್ಥಾನದ ಬಹುಮತದೊಂದಿಗೆ ಪ್ರಧಾನಿಯಾಗಿದ್ದರು. 2019ರ ಏ.9ರಂದು ಚುನಾವಣೆ ನಡೆದಾಗ ಯಾವ ಪಕ್ಷಕ್ಕೂ ಬಹುಮತ ಸಿಗಲಿಲ್ಲ. ಹೀಗಾಗಿ ಸೆ.17ರಂದು ಮತ್ತೊಂದು ಚುನಾವಣೆಯನ್ನು ಇಸ್ರೇಲ್ ಎದುರಿಸಿತು. ಅದರಲ್ಲೂ ನೇತಾನಹುಗೆ ಬಹುಮತ ದೊರೆಯಲಿಲ್ಲ.